**ದಿನಾಂಕಃ 20.12.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ – 1 ನೇ ಎದುರುದಾರರ ಪರ ಶ್ರೀ.ಎಸ್.ಡಿ.ಕೆ ವಕೀಲರಿಂದ–**

ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲ ವಿಷಯಗಳನ್ನು ಓದಿ, ತಿಳಿದುಕೊಂಡು ಅದಕ್ಕೆ ನನ್ನ ಸಹಿಯನ್ನು ಹಾಕಿರುತ್ತೇನೆ. ಅದರಲ್ಲಿನ ಎಲ್ಲ ಸಂಗತಿಗಳು ಸತ್ಯವಾಗಿರುತ್ತವೆ. ಅದನ್ನು ನಾನೇ ಹೇಳಿ ಬರೆಸಿರುತ್ತೇನೆ.

ಆರ್.ಸಿ ಪುಸ್ತಕ, ಬಿ ಎಕ್ಸಟ್ರ್ಯಾಕ್ಟ್, ಸರಕು ಸಾಗಾಣಿಕೆ ಪರವಾನಿಗೆ, ಜಿ.ಪಿ.ಎಸ್ ಪ್ರಮಾಣಪತ್ರ, ಹೊಗೆ ಪ್ರಮಾಣ ಪತ್ರ, ವಿಮೆ ಪಾಲಿಸಿ, ತೆರಿಗೆ ಪಾವತಿ ರಶೀದಿ, ಚಾಲನಾ ಪರವಾನಿಗೆ ದಾಖಲೆಗಳ ಝುರಾಕ್ಸ್ ಪ್ರತಿಯನ್ನು ಹಾಜರುಪಡಿಸಿರುತ್ತಾರೆ.

ಆದ್ದರಿಂದ 1 ನೇ ಎದುರುದಾರರ ಪರ ಪರಿಹಾರದ ಅರ್ಜಿಯನ್ನು ವಜಾ ಮಾಡಬೇಕಾಗಿ ಪ್ರಾರ್ಥನೆ.

**ಪಾಟೀ ಸವಾಲುಃ** ಅರ್ಜಿದಾರರ ಪರ ಶ್ರೀ. ಐ.ಎಸ್.ಎಚ್ ವಕೀಲರಿಂದ.

ಅಪಘಾತವನ್ನು ನಾನು ನೋಡಿರುವದಿಲ್ಲ ಎಂದರೆ ಸರಿ. ವಾಹನದ ಚಾಲಕ ನನಗೆ ಪೋನ್ ಮಾಡಿದ ಅಪಘಾತವಾಗಿದೆ ಎಂದು ತಿಳಿಸಿದ್ದು, ನಾನು ಅಪಘಾತ ಸ್ಥಳಕ್ಕೆ ಹೋದಾಗ ಅಪಘಾತದ ಸ್ಥಳದಲ್ಲಿ ಒಬ್ಬ ಅಜ್ಜಿ ಕುಳಿತಿದ್ದಳು ಆಕೆ ಅಪಘಾತದ ಕುರಿತು ತಿಳಿಸಿರುತ್ತಾಳೆ. ಸದರಿ ಅಜ್ಜಿಯ ಹೆಸರು ನನಗೆ ನೆನಪಿಲ್ಲ. ಅಪಘಾತ ಹೇಗಾಯಿತು ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾನು ಪೋಲಿಸರು ಸಲ್ಲಿಸಿದ ದಾಖಲೆಗಳನ್ನು ನೋಡಿರುವದಿಲ್ಲ. ಅಪಘಾತದ ನಂತರ ಪೋಲಿಸರು ಸಂಪೂರ್ಣ ತನಿಕೆ ಮಾಡಿ ಅಂತಿಮ ವರದಿ ಸಲ್ಲಿಸಿದ್ದಾರೆ ಎಂದರೆ ಸರಿ.

ಅಪಘಾತದ ಕುರಿತು ನಮ್ಮ ವಾಹನದ ಚಾಲಕನ ವಿರುದ್ದ ಪ್ರಕರಣ ದಾಖಲಾಗಿತ್ತು ಎಂದರೆ ಸರಿ. ಅಪಘಾತದಲ್ಲಿ ಮೃತಪಟ್ಟ ಮಹಿಳೆಯ ವಯಸ್ಸು 75 ವರ್ಷದ ಮೇಲಿತ್ತು. ಮೃತ ಮಹಿಳೆಗೆ 50 ವರ್ಷ ವಯಸ್ಸಾಗಿತ್ತು ಮತ್ತು ಆಕೆ, ತರಕಾರಿ ವ್ಯಾಪಾರ ಮಾಡುತ್ತಿದ್ದಳು ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಸಲ್ಲಿಸಿದ ದಾಖಲೆಗಳ ಮೂಲ ದಾಖಲೆಗಳು ದೊರೆಯುತ್ತವೆ ಎಂದರೆ ಸರಿ. ಅವುಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವದಿಲ್ಲ ಎಂದರೆ ಸರಿ. ಅಪಘಾತ ನಮ್ಮ ವಾಹನದ ಚಾಲಕನ ತಪ್ಪಿನಿಂದ ಆಗಿದೆ ಎಂದರೆ ಸರಿಯಲ್ಲ. ಪರಿಹಾರದ ಹಣ ಕೊಡಬೇಕಾಗುತ್ತದೆ ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು.** 2 ನೇ ಎದುರುದಾರರ ಪರ ಶ್ರೀ.ಎನ್.ಜಿ.ಕೆ ವಕೀಲರಿಂದ.

ಅಪಘಾತ ಸಮಯದಲ್ಲಿ ಸದರಿ ವಾಹನದ ಚಾಲಕ ಬಸವರಾಜ ಬಿಸನಾಳರವರು ಇದ್ದರು. ಬಸವರಾಜ ಬಿಸನಾಳ ರವರು 10 ವರ್ಷಗಳಿಂದ ನಮ್ಮ ವಾಹನದ ಚಾಲಕ ಎಂದು ಕೆಲಸ ಮಾಡುತ್ತಿದ್ದನು. ವಾಹನದ ಚಾಲಕನನ್ನು ನೇಮಿಸುವ ಕಾಲಕ್ಕೆ ವಾಹನ ಚಾಲನಾ ಪರವಾನಿಗೆ ಪರಿಶೀಲಿಸಿರುತ್ತೇವೆ. ಬಸವರಾಜ ಬಿಸನಾಳರವರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಾಗಿದೆ ಎಂದರೆ ಸರಿ. ಪೋಲಿಸರು ನಮ್ಮ ವಾಹನದ ಚಾಲಕನ ವಿರುದ್ಧ ವಾಹನ ಪರವಾನಿಗೆ ಇಲ್ಲ ಎಂದು ಅಂತಿಮ ವರದಿ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಸ್ವತಃ ನುಡಿಯುವುದೇನೆಂದರೆ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ. ಚಾಲನಾ ಪರವಾನಿಗೆಯನ್ನು ಅಪಘಾತಕ್ಕಿಂತ ಒಂದು ವಾರ ಮೊದಲು ನವೀಕರಣ ಮಾಡಿಸಿರುತ್ತೇವೆ. ಬಸವರಾಜನ ಚಾಲನಾ ಪರವಾನಿಗೆ ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ಚಾಲ್ತಿಯಲ್ಲಿತ್ತು ಎಂದು ಹೇಳಲು ಬರುವದಿಲ್ಲ. ಅಂತಿಮ ವರದಿಯನ್ನು ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಿರುವದಿಲ್ಲ. ಬಸವರಾಜನ ಚಾಲನಾ ಪರವಾನಿಗೆ ಮೂಲ ಪ್ರತಿ ಹಾಜರುಪಡಿಸಲು ತೊಂದರೆ

ಇಲ್ಲ ಎಂದರೆ ಸರಿ. ನಾನು ನನ್ನ ವಾಹನವನ್ನು ಚಾಲನಾ ಪರವಾನಿಗೆ ಇಲ್ಲದ ವ್ಯಕ್ತಿಗೆ ಕೊಟ್ಟು ವಿಮೆ ಶರತ್ತುಗಳನ್ನು ಉಲ್ಲಂಘನೆ ಮಾಡಿದ್ಧೇನೆ ಎಂದರೆ ಸರಿಯಲ್ಲ. 2 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಪರಿಹಾರ ಕೊಡಲು ನಾನು ಭಾಧ್ಯಸ್ಥನಾಗಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ತೆ ನ್ಯಾ ನನ್ನ ಹೇ ಬೆ ಮಾಡಲಾಗಿದೆ)

ನನ್ನ ಸಮಕ್ಷಮ,

ಓ.ಹೇ.ಕೇ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ. ಮುದ್ದೇಬಿಹಾಳ